**ವ್ಯಾಖ್ಯಾನ**

# ವೈದ್ಯ ಬಂದ ನೋಡಿ ವೆಂಕಟನೆಂಬ.....

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 48.

**ಕೀರ್ತನೆಯ ಚಿಂತನೆ:**

ಶ್ರೀ ಪುರಂದರದಾಸರು ತಮ್ಮ ಗುರುಗಳಾದ ಶ್ರೀ ವ್ಯಾಸರಾಜರಿಂದ 'ದಾಸರೆಂದರೆ ಪುರಂದರದಾಸರಯ್ಯ' ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಇವರ ಕೃತಿಗಳು ವೈವಿಧ್ಯಮಯವಾದದ್ದು. ಇವರಿಗೆ ಭಗವಂತನನ್ನು ಎಷ್ಟು ವಿಧಗಳಿಂದ, ಎಷ್ಟೆಷ್ಟು ಗುಣಗಳಿಂದ, ಎಂತೆಷ್ಟು ರೂಪಗಳಲ್ಲಿ ಕೊಂಡಾಡಿದರೂ ಸಾಲದು. ವೇಂಕಟೇಶನ ಅನುಗ್ರಹದಿ ಅವತರಿಸಿ ಬಂದ ಇವರು ಆ ದೈವವನ್ನು ಈ ಪ್ರಸ್ತುತ ಕೃತಿಯಲಿ ವೈದ್ಯನೆಂದು ಸಂಬೋಧಿಸಿರುವುದು ಔಚಿತ್ಯಪೂರ್ಣವಾಗಿದೆ. ಯಾವದೇ ತರಹದ ರೋಗಕ್ಕೂ ವೈದ್ಯನ ಅವಶ್ಯಕತೆಯಿದೆ. ದೈಹಿಕವಾಗಲಿ ಮಾನಸಿಕವಾಗಲಿ ವೈದ್ಯನ ಪ್ರಯತ್ನ ಕಿಂಚಿತ್ ಫಲಕಾರಿಯಾಗಬಹುದು ಭಗವಂತನ ಕೃಪೆಯಿದ್ದರೆ. **'ವೈದ್ಯೋ ನಾರಾಯಣೋ ಹರಿಃ'** ಎಂದಂತೆ ನಿಜವಾದ ವೈದ್ಯ ಶ್ರೀಹರಿಯೇ ಆಗಿರುವ. ಇನ್ನು ಜೀವರ ಭವರೋಗಕ್ಕೆ ವೈದ್ಯನಾದವನು ಅದನ್ನು ಹೊಂದದವನೇ ಆಗಿರಬೇಕಲ್ಲವೆ. ಅವನೇ ವೇಂಕಟೇಶ. ಕಾರಣ ಅವನು ಜೀವರು ಮಾಡಿದ ಎಲ್ಲ ಪಾಪರಾಶಿಯನ್ನು ಸುಟ್ಟು ಹಾಕುವವನು. ಜೀವರು ಎಸಗಿದ ಪಾಪಗಳಿಂದಲೇ ಈ ಸಂಸಾರ, ಈ ಭವಸಾಗರ ದಾಟಲು ಪಾಪಗಳಿಂದ ಮುಕ್ತನಾಗಬೇಕು. ಈ ಪಾಪಗಳಿಂದ ಮೋಚನ ಮಾಡುವ ಅಂದರೆ ಭವರೋಗವನ್ನು ನಿವಾರಿಸುವವನು ಅವನೇ. **'ವೇಂ ಪಾಪಂ ಕಟತೇ ಯಸ್ಮಾತ್ ಪಾಪದಾಹನ ಶಕ್ತಿತಃ'** ಎಂಬ ಮಾತಿನಂತೆ ಜೀವರ ಪಾಪಗಳನ್ನು ಸುಟ್ಟು ಹಾಕಲು ಸಮರ್ಥನಾದವನು 'ವೆಂಕಟ' ನಾಮದ ಶ್ರೀಹರಿ. ಹೀಗಾಗಿ ದಾಸರು ಆ ವೆಂಕಟನನ್ನು ವೈದ್ಯನೆಂದು ಕೊಂಡಾಡಿರುವರು. ಇದನ್ನೇ ಶ್ರೀವಿಷ್ಣು ಸಹಸ್ರನಾಮದಲ್ಲೂ 'ವೇದ್ಯೋ ವೈದ್ಯಃ' ಎಂದಾಗಿ ಉಕ್ತವಾಗಿದೆ.

ಶ್ರೀ ಪುರಂದರದಾಸರು ನಮ್ಮ ಭವರೋಗ ವೈದ್ಯ ವೆಂಕಟನು ತನ್ನ ನಿಜಭಕ್ತರನ್ನು ಉದ್ಧರಿಸಲು ಕಟಿಬದ್ಧನಾಗಿರುವುದಾಗಿ ಚಿಂತಿಸುವ ಕ್ರಮ ಮನೋಹರವಾಗಿದೆ. ಹೀಗೆ ಭಗವರೋಗ ವೈದ್ಯನಾದ ವೆಂಕಟನ ವೈಶಿಷ್ಟ್ಯವನ್ನು ಭಕ್ತಿಪುರಸ್ಸರವಾಗಿ ಅವನ ಮಹಿಮೆಗಳೊಂದಿಗೆ ತಿಳಿಸಿಕೊಡುವರು.

**ವೈದ್ಯ ಬಂದ ನೋಡಿ ವೆಂಟನೆಂಬ**
**ವೈದ್ಯ ಬಂದ ನೋಡಿ** ॥ ಪ ॥

**ವೈದ್ಯ ಬಂದನು ವೇದವೇದ್ಯ ನೋಡೀಗಲೇ**
**ಶ್ರೀದೇವಿರಮಣನು ಶ್ರೀನಿವಾಸನೆಂಬ** ॥ ಅ.ಪ. ॥

ಕಲಿಯುಗದ ಪರದೈವನೇ ಶ್ರೀವೇಂಕಟೇಶ. ಅವನೇ ಶ್ರೀನಿವಾಸ. ವೈಕುಂಠದಿಂದ ನಂಬಿದ ಭಕ್ತರನ್ನು ಉದ್ಧರಿಸಲೆಂದೇ ಧರೆಗಿಳಿದು ಬಂದ ಭಗವಂತ. ಇದನ್ನೇ ವೇಂಕಟೇಶ ಸ್ತೋತ್ರದಲ್ಲಿ,

**ಮಾಯಾವೀ ಪರಮಾನಂದಂ ತ್ಯಾಕ್ತ್ವಾ ವೈಕುಂಠಮುತ್ತಮಮ್ ।**
**ಸ್ವಾಮಿಪುರಷ್ಕರಣೀ ತೀರೇ ರಮಯಾಸಹಮೋದತೇ ॥**

ಎಂದು ಬಣ್ಣಿತವಾಗಿದೆ. ವೆಂಕಟಾಚಲವೆಂದು ಕಲಿಯುಗದಲ್ಲಿ ಪುರಾಣಪ್ರಸಿದ್ಧವಾದ ಕ್ಷೇತ್ರ ತಿರುಪತಿ. ಈ ತಿರುಮಲೇಶ ತನ್ನ ರಮಣಿಯಾದ ಲಕ್ಷ್ಮೀದೇವಿ ಸಹಿತನಾಗಿ ಭಕ್ತರಿಗೆ ಅಭಯಪ್ರದನಾಗಿ ಭವರೋಗ ವೈದ್ಯನಾಗಿ ಬಂದು ನೆಲೆಸಿರುವ. ಅದಕ್ಕೆ ವೆಂಕಟ ಬಂದ ನೋಡಿ ಎಂದು ಉದ್ಗಾರವೆತ್ತಿದರು. ಇವನೇ ಸರ್ವೋತ್ತಮ. ಲಕ್ಷ್ಮೀ ಬ್ರಹ್ಮರುದ್ರಾದಿಗಳಿಂದ ಸರ್ವದಾ ವಂದ್ಯನಾದನವನು. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾಗಿ, ಸೃಷ್ಟ್ಯಾದಿ ಅಷ್ಟಕರ್ತೃವು ಆಗಿರುವ. ಭಗವಂತನು 'ಬಂಧಕೋಭವಪಾಶೇನ ಭವಪಾಶಾಶ್ಚ ಮೋಚಕಃ' ಬ್ರಹ್ಮಾದಿ ಸಕಲ ಜೀವರನ್ನು ಸೃಷ್ಟಿಸಿ ಈ ಸಂಸಾರದಲ್ಲಿ ಮುಳಿಗಿಸುವವನು ಹಾಗೂ ಇದರಿಂದ ಬಿಡುಗಡೆ ಹೊಂದಿಸುವವನೂ ಅವನೇ ಆಗಿರುವ. ಒಟ್ಟಿನಲ್ಲಿ ಈ ಭವರೋಗಕ್ಕೆ ದಿವ್ಯೌಷಧಿಯು ವೇಂಕಟೇಶನೇ ಆಗಿರುವ. ಅವನನ್ನು ಮುಕ್ತ ಕಂಠದಿಂದ ಭಕ್ತಿಯಿಂದ ಕರೆದು 'ವೈದ್ಯ ಬಂದ ನೋಡಿ' ಎಂದು ಸಜ್ಜನರಿಗೆ ಭಗವಂತನ ದಿವ್ಯ ದರುಶನವನ್ನು ಮಾಡಿಸಿ, ಇವನೇ ಭವರೋಗವನ್ನು ಕಳೆಯುವವನು ಎಂದು ಬೋಧಿಸುವರು.

ಅಕ್ಷರಳೆನಿಸಿ ಸಕಲ ವೇದಾಭಿಮಾನಿನಿಯಾದ ಲಕ್ಷ್ಮೀದೇವಿಗೆ ಒಡೆಯನಾದ ಶ್ರೀನಿವಾಸ ಸಮಸ್ತ ಸದಾಗಮಗಳಿಂದ ವೇದ್ಯನಾಗಿರುವ ಕ್ಷರಾಕ್ಷರರಿಂದ ಉತ್ತಮನೆನಿಸಿ ಪುರುಷೋತ್ತಮನಾದವನು. ಇವನೇ ಶ್ರೀಯಃಪತಿ. ಶ್ರೀಕೃಷ್ಣ ಗೀತೆಯಲ್ಲಿ **'ವೇದೈಶ್ಚ ಸರ್ವೈರಹ ಮೇವ ವೇದ್ಯೋ'** ಎಂದು ಹೇಳಿಕೊಂಡಂತೆ ವೇದವೇದ್ಯನಾಗಿರುವ. ಯಾವ ಬ್ರಹ್ಮ ರುದ್ರಾದಿ ದೇವತೆಗಳಿಂದ ವಂದಿತಳಾದ, ಅವರನ್ನು ಆಯಾ ಸ್ಥಾನಗಳಲ್ಲಿರಿಸಿ ನಿಯಂತ್ರಿಸುವ ಲಕ್ಷ್ಮೀದೇವಿಗೂ ನಿಯಾಮಕನಾದವನು ಶ್ರೀಹರಿ. ಅವನೇ ಶ್ರೀನಿವಾಸ. ಶ್ರೀರೂಪಿ ಲಕ್ಷ್ಮಿಗೂ ಆಶ್ರಯನಾದವನು.

**ಎಷ್ಟು ದಿನದ ರೋಗಂಗಳೆಂಬುದು ಬಲ್ಲ**
**ಗಟ್ಟಿಯಾಗಿ ಧಾತುರಸಗಳನು ಬಲ್ಲ**
**ಕಷ್ಟಬಡಿಸದಲೆನ್ನ ಭವರೋಗ ಬಿಡುಸುವ**
**ಶಿಷ್ಟವಾದ ದೇಹ ಕೊಟ್ಟು ಕಾಯುವನಿವ ॥ 1 ॥**

ಅಣುರೇಣುತೃಣಕಾಷ್ಠಗಳಲಿ ನಿರಂತರ ನೆಲೆಸಿ ಸರ್ವವ್ಯಾಪ್ತನಾದ ಭಗವಂತ ಸರ್ವಜ್ಞನಾಗಿ ಈ ಚರಾಚರ ಜಗತ್ತಿನ ನಿಯಾಮಕ. ಭಗವಂತನೇ ಹೇಳಿದಂತೆ **'ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ'** ಜಗತ್ತಿನಲ್ಲಿ ಇವನಿಗೆ ಮಿಗಿಲಾದದ್ದು ಮತ್ತೊಂದು ಇಲ್ಲ ಹೀಗಾಗಿ ಎಲ್ಲವನ್ನೂ ತಿಳಿದವನಾಗಿರುವ. ಜೀವರಿಗೆ ದೇಹವನ್ನು ಕೊಟ್ಟವನೇ ಅವನೆಂದ ಮೇಲೆ ದೇಹದ ಮೂಲಗಳನ್ನು ಬಲ್ಲವನಾಗಿ, ಈ ದೇಹದಿಂದ ಸಾಧನೆಗಳನ್ನು ಮಾಡಿಸಿ ಉದ್ಧರಿಸುವವನೂ ಅವನೇ ಆಗಿರುವ, ಜೀವರ ಬಿಂಬಮೂರುತಿಯಾದ ಭಗವಂತನ ಇರವಿನಿಂದಾಗಿ ಈ ದೇಹಗತ ಸಕಲ ವಸ್ತುಗಳ ಇರುವಿಕೆ. ಈ ಪಾಂಚಭೌತಿಕ ದೇಹದಲ್ಲಿ ಧಾತು (ದೇಹದಲ್ಲಿಯ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜ ಹಾಗೂ ಶುಕ್ಲ)ಗಳು. ಹುಟ್ಟಿಸಿದ ಭಗವಂತನಿಗೆ ಈ ಸ್ಥೂಲದೇಹದ ಅಂತ್ಯವೂ ತಿಳಿದಿದೆ. ಈ ಸಂಸಾರ ಚಕ್ರದಲ್ಲಿ ಈ ಹುಟ್ಟು ಸಾವುಗಳ ಲೆಕ್ಕವನ್ನೂ ಬಲ್ಲ. ಇಲ್ಲಿ ದಾಸರು ರೋಗವೆಂದದ್ದು ಭಗವರೋಗದ ಬಗ್ಗೆ. ಅದಕ್ಕೇ ದಾಸರು ಈ ಭವರೋಗದಿಂದ ಬಿಡಿಸೆಂದು ಪ್ರಾರ್ಥಿಸಿದರು. ಆದರೆ ದಾಸರು ಇನ್ನೊಂದು ಕಡೆ 'ಸಂಸಾರವೆಂತೆಂಬೊ ಸೌಭಾಗ್ಯವಿರಲಿ' ಎಂದು ಅಂದದ್ದುಂಟು. ಇದರರ್ಥ, ಈ ಸಾಧನ ಶರೀರದಿಂದ ಮಾತ್ರ ಭಗವಂತನನ್ನು ಕಿಂಚಿತ್ ತಿಳಿಯಲು ಅವನ ಅನುಗ್ರಹ ಹೊಂದಲು ಸಾಧ್ಯ. ಸಮೀಚೀನ ಜ್ಞಾನವನ್ನು ಪಡೆಯಬಹುದಾದಂತಹ ಈ ವೈಷ್ಣವ ಜನುಮವನ್ನು (ಶಿಷ್ಟವಾದ ದೇಹ) ಕೊಟ್ಟು ಸಲಹೆಂದು ಬಿನ್ನೈಸಿಕೊಂಡರು. ಇದು ಬಹು ದುರ್ಲಭವಾದ ಜನ್ಮ 'ದುರ್ಲಭೋ ಮಾನುಷೋ ದೇಹಃ ತದಪ್ಯಧ್ರುವಮರ್ಥ ದಮ್' ಎಂದು ಭಾಗವತೋಕ್ತಿಯು.

**ಹೊನ್ನು ಹಣಂಗಳ ಅನ್ನವ ಅನುಸರಿಸಿ**
**ತನ್ನ ದಾಸನೆಂಬ ನಿಜವ ನೋಡಿ**
**ಚೆನ್ನಾಗಿ ಜಿಹ್ವೆಗೆ ಸ್ವಾರವಾಗಿರುವಂಥ**
**ತನ್ನ ನಾಮಾಮೃತ ದಿವ್ಯ ಔಷಧವೀವ ॥ 2 ॥**

**'ತೇನತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ ಧನಮ್'** ಎಂದು ಉಪನಿಷತ್ತು ಸಾರಿದಂತೆ, ದೈವೇಚ್ಛೆಯಿಂದ ಸಿಕ್ಕಿದ್ದನ್ನು ಅನುಭವಿಸಬೇಕು. ಎಂದಿಗೂ ಬೇರೆಯವರಿಂದ ಏನನ್ನೂ ಬಯಸಬಾರದು. ಕೊಡಬಲ್ಲ ಸ್ವತಂತ್ರ ವ್ಯಕ್ತಿ ಅವನೇ ಆದ್ದರಿಂದ. ಅದಕ್ಕೆ ದಾಸರು 'ಬೇಡಿದರೆ ಎನ್ನೊಡೆಯನ ಬೇಡುವೆ' ಎಂದದ್ದು. ಅವನಿಂದ ದತ್ತವಾದದ್ದನ್ನು ಅವನ ಸೇವೆಗಾಗಿ ವಿನಿಯೋಗಿಸಿ ಪುನೀತನಾಗಬೇಕು. ಅಂದರೆ ದೈವದತ್ತವಾದ ಬಂಗಾರ, ಧನ, ಐಶ್ವರ್ಯ, ಅನ್ನ, ಪಶು, ಪುತ್ರಾದಿಗಳ ಮೂಲಕ ಅವನ ಸೇವಾದಿಗಳನ್ನು ಮಾಡುತ್ತಿರುವದನ್ನು ಗಮನಿಸಿದ ಭಗವಂತನು ಭಕ್ತನ ಸ್ವರೂಪಕ್ಕೆ ಅನುಗುಣವಾಗಿ ಉದ್ಧರಿಸುವನು. ಶ್ರೀಹರಿಯೇ ತನ್ನ ದಾಸನೆಂದು ಸ್ವೀಕರಿಸದ ವಿನಃ ಅನ್ಯಗತಿಯಿಲ್ಲ. ಶ್ರೀಹರಿ ತನ್ನಲ್ಲಿ ತಾರತಮ್ಯೋಕ್ತವಾಗಿ ಅನ್ಯರಲ್ಲಿ ಮಾಡುವ ಭಕ್ತಿಯನ್ನು ಪರೀಕ್ಷಿಸುವ. ನಂತರ **'ತೇಷಾಂ ನಿತ್ಯಾಭಿಯುಕ್ತನಾಂ ಯೋಗಕ್ಷೇಮಂ ವಹಾಮ್ಯಹಮ್'** ಎಂದಂತೆ ಅಂತಹ ಭಕ್ತರ ಯೋಗಕ್ಷೇಮವನ್ನು ತಾನು ನೋಡಿಕೊಳ್ಳುವ. ಅಂದರೆ ಶ್ರೀಹರಿ ತನ್ನ ನಂಬಿದ ಭಕ್ತರಿಗೆ ತನ್ನ ಅರಿವನ್ನು ಕಲ್ಪಿಸಿ, ತನ್ನ ನಾಮಾಮೃತವನ್ನು ಸವಿಯುವಂತಾಗಿಸುವ. ಇದು ಜನ್ಮ ಸಾಫಲ್ಯ. ಪುರಂದರದಾಸರು ಒಂದು ಕಡೆ 'ನರಜನ್ಮ ಬಂದಾಗ ನಾಲಿಗೆ ಇದ್ದಾಗ ಕೃಷ್ಣ ಎನಬಾರದೆ' ಎಂದು ಪ್ರಶ್ನಿಸಿದ್ದು ಇದೆ ಕಾರಣದಿಂದ. ಇನ್ನೊಂದು ಕೀರ್ತನೆಯಲ್ಲಿ 'ನಾರಾಯಣ ನಿನ್ನ ನಾಮಾಮೃತವನ್ನು ನಾಲಿಗೆಯಲೀ ನಿಲಿಸಯ್ಯ' ಎಂದು ಬೇಡಿರುವರು.

ಶ್ರೀಮದಾಚಾರ್ಯರು ತಮ್ಮ ಕೃಷ್ಣಾಮೃತ ಮಹಾರ್ಣವದಲ್ಲಿ

**ಯೇ ಸ್ಮರಂತಿ ಸದಾ ವಿಷ್ಣುಂ ವಿಶುದ್ಧೇನಾಂತರಾತ್ಮನಾ ।**
**ತೇ ಪ್ರಯಾಂತಿ ಭವಂ ತ್ಯಾಕ್ತ್ವಾ ವಿಷ್ಣುಲೋಕಮನಾಮಯಮ್ ॥**

ನಿರ್ಮಲವಾದ ಮನಸ್ಸಿನಿಂದ ಯಾರು ವಿಷ್ಣುವನ್ನು ಸ್ಮರಿಸುವರೋ, ಸಂಕೀರ್ತನೆ ಮಾಡುವರೋ ಅವರು ನಿರ್ದೋಷವಾದ ವಿಷ್ಣು ಲೋಕವಾದ ವೈಕುಂಠವನ್ನು ಹೊಂದುವರು. ಇದನ್ನೇ **'ಪ್ರಯಾಂತಿ**

**ವಿಲಯಂ ಸದ್ಯಃ ಸಕೃತ್ ಸಂಕೀರ್ತಿತೇಽಚ್ಯುತೇ ॥** ಅಚ್ಯುತನ ನಾಮ ಸಂಕೀರ್ತನೆ ಭಕ್ತಿಯಿಂದ ಒಮ್ಮೆ ಮಾಡಿದರೂ ಕೂಡಲೆ ದೋಷ ನಾಶಹೊಂದುವದೆಂದು ಹೇಳಿರುವರು.

ಶ್ರೀಪಾಂಡವಗೀತೆಯಲ್ಲಿ

**ಅಚ್ಯುತಾನಂತ ಗೋವಿಂದ ನಾಮೋಚ್ಚಾರಣ ಭೇಷಜಾತ್ ।**
**ನಶ್ಯಂತಿ ಸಕಲಾರೋಗಾಃ ಸತ್ಯಂ ಸತ್ಯಂ ವದಾಮ್ಯಹಮ್ ॥**

ಸಕಲ ರೋಗಗಳಿಗೆ ದಿವ್ಯೌಷಧಿ ಎಂದರೆ ಅಚ್ಯುತಾನಂತಗೋವಿಂದನ ನಾಮೋಚ್ಚಾರಣೆ ಎಂದಾಗಿದೆ.

**ಈತ ದಿಟ್ಟಿಸಿ ನೋಡೆ ಎಳ್ಳಷ್ಟು ರೋಗವಿಲ್ಲ**
**ಈತನುವಿಗೆಂದೆಂದು ರೋಗ ಬರಲರಿಯದು ।**
**ಈತ ಅನಂತ ರೂಪದಿ ಜೀವರಿಗೆ ಮುನ್ನ**
**ಪ್ರೀತಿಯಿಂದಲಿ ಭವರೋಗ ಬಿಡಿಸುವ ॥ 3 ॥**

ದಾಸರು 'ಭವರೋಗ ವೈದ್ಯನಿವ' ಎಂದ ಮಾತನ್ನು ಸಮರ್ಥಿಸುವರು. ಶ್ರೀಹರಿಯ ಕೃಪಾಪೂರ್ಣ ನೋಟವೇ ದಿವ್ಯ ಔಷಧಿಯು. ಇದಕ್ಕೆ ಪ್ರಮಾಣವಾಗಿ ಜಿತಂತೇ ಸ್ತೋತ್ರದಲ್ಲಿ,

**ಆಯುತಾಭ್ಯಾಂ ವಿಶಾಲಾಭ್ಯಾಂ ಶೀತಲಾಭ್ಯಾಂ ಕೃಪಾನಿಧೇ ।**
**ಕರುಣಾರಸ ಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ ॥**

'ಹೇ ಭಗವಂತ! ನಿನ್ನ ಕರುಣಾರಸ ಕಂಗಳಿಂದ ನನ್ನನ್ನೊಮ್ಮೆ ನೋಡು' ಎಂದು ಪ್ರಾರ್ಥಿಸಿರುವುದನ್ನು ಕಂಡಾಗ ಅವನ ಕೃಪಾದೃಷ್ಟಿ ಎಲ್ಲ ದೋಷಗಳನ್ನೂ ನಾಶಪಡಿಸಿ ನಿರ್ದೋಷವಾದ ಶಾಶ್ವತ ಸುಖದ ನೆಲೆಯಾದ ಮುಕ್ತಿಪದವನ್ನು ಕೊಡಬಲ್ಲದು. ಇದು ಭವರೋಗಕ್ಕೆ ಅನನ್ಯವಾದ ಔಷಧಿಯು. ಭವರೋಗದ ವೈದ್ಯನಾದ ವೇದವೇದ್ಯನಾದ ವೇಂಕಟೇಶನು ಭೌತಿಕ ದೇಹದ ರೋಗವನ್ನು

ಪರಿಹರಿಸುವುದೇನಾಶ್ಚರ್ಯ. ಅನಂತಾನಂತ ರೂಪದಿ ದೇಹದಿ ನೆಲೆಸಿರುವ ಭಗವಂತನ ಪ್ರೀತಿ ಸಂಪಾದಿಸಿದಲ್ಲಿ ಈ ಸಂಸಾರ ಸಾಗರವನ್ನು ಅಂಬಿಗನಾಗಿ ದಾಟಿಸುವಲ್ಲಿ ಸಂಶಯವೇಕೆ ಎನ್ನುವರು.

**ಧರ್ಮ ವೈದ್ಯನಿವ ಜಗಕೆಲ್ಲ ಒಬ್ಬನೆ**
**ಮರ್ಮ ಬಲ್ಲ ರೋಗ ಜೀವಂಗಳ ।**
**ನಿರ್ಮಲವಾಗಿಹ ತನ್ನ ನಾಮಸ್ಮರಣೆ**
**ಒಮ್ಮೆ ಮಾಡಲು ಭವರೋಗ ಬಿಡಿಸುವ ॥ 4 ॥**

ಜಗತ್ತಿನಲ್ಲಿ ಸ್ವತಂತ್ರನಾದವನು ಒಬ್ಬನಿರುವ. ಅವನೇ ಧರ್ಮವೈದ್ಯ. ಅವನೇ ಸತ್ಯ ಸಂಕಲ್ಪ ಸಕಲ ಸೂತ್ರಧಾರಿ. ಸಮಸ್ತ ಜೀವರಾಶಿಗಳ ಸರ್ವಸ್ವವನ್ನೂ ತಿಳಿದವನು, ತಿಳಿದಂತೆ ಮಾಡುವವನು ಅವನೇಯಾಗಿರುವ ಸಕಲ ಗುಣಪೂರ್ಣನಾಗಿ ಸಮಸ್ತ ದೋಷದೂರನಾದ ಅವನ ನಾಮೋಚ್ಚಾರಣೆಯೇ ಸಕಲ ಅಭೀಷ್ಟಫಲದಾಯಕವು. ತನ್ನ ಭಕ್ತರನ್ನೂ ದೋಷ (ಭವರೋಗ) ಮುಕ್ತರನ್ನಾಗಿಸುವ ಶ್ರೀ ಪುರಂದರರ ಗುರುಗಳಾದ ಶ್ರೀವ್ಯಾಸತೀರ್ಥರು,

**ಕೃಷ್ಣ ಕೃಷ್ಣ ಕೃಷ್ಣ ಎಂದು ಮೂರು ಬಾರಿ ನೆನೆಯಿರೊ ।**
**ಸಂತುಷ್ಟನಾಗಿ ಮುಕುತಿ ಕೊಟ್ಟು ಮಿಕ್ಕ ಭಾರ ಹೊರುವನೊ ॥** ಎಂದರು.

ಇದಕ್ಕೆ ಪೂರಕವಾಗಿ 'ಸ್ಮರಣೆ ಒಂದೇ ಸಾಲದೇ ಗೋವಿಂದನ ನಾಮ ಒಂದೇ ಸಾಲದೆ ?' ಎಂದದ್ದನ್ನು ಕಾಣುತ್ತೇವೆ. ಭಗವಂತ ನಿಷ್ಪಕ್ಷಪಾತದಿಂದ ಜೀವರ ಯೋಗ್ಯತೆಯನ್ನು ನೋಡಿ ಅವರವರ ಗತಿಯನ್ನು ಕಲ್ಪಿಸುವನು. ಅದಕ್ಕೇ ದಾಸರು ಅವನನ್ನು ಧರ್ಮವೈದ್ಯನೆಂದು ಸಂಭೋದಿಸಿರುವರು. ಶ್ರೀಹರಿಯ ಕೀರ್ತನೆಯ ಫಲವನ್ನು ಶ್ರೀಮದಾನಂದತೀರ್ಥರು ಹೀಗೆ ಹೇಳಿರುವರು.

ಅವಶೇನಾಪಿಯನ್ನಾಮ್ನಿಕೀರ್ತಿತೇ ಸರ್ವಪಾತಕೈಃ । ಪುಮಾನ್ ವಿಮುಚ್ಯತೇ ಸದ್ಯಃ...

ಹೇಗಾದರೂ ಶ್ರೀಹರಿಯ ನಾಮೋಚ್ಚಾರಣೆಯನ್ನು ಮಾಡಿದಲ್ಲಿ ಕೂಡಲೆ ಸರ್ವ ಪಾಪಗಳಿಂದ ಬಿಡುಗಡೆ ಹೊಂದುವ ಕಲಿಯುಗದಲ್ಲಿ ಇನ್ನೂ ವಿಶೇಷ ಫಲವೆಂದು ಭಾಗವತ ತಿಳಿಸಿದೆ.

'ಕಲೌ ಭಾಗವತೀ ವಾರ್ತಾ ಭವರೋಗ ವಿನಾಶನೀ' ಅನಂತಕಾಲದಿಂದ ಜೀವರಿಗೆ ಅಂಟಿಕೊಂಡ ಈ ಭವರೋಗವನ್ನೇ ಭಗವಂತನ ನಾಮಸ್ಮರಣೆಯು, ಶ್ರೀಹರಿಯ ಕಥಾ ಶ್ರವಣಾದಿಗಳು ನಾಶಪಡಿಸಬಲ್ಲವು.

**ಅನ್ಯ ವೈದ್ಯನೇಕೆ ಅನ್ಯ ಔಷಧವೇಕೆ**
**ಅನ್ಯ ಮಂತ್ರ ತಂತ್ರ ಜಪವೇತಕೆ ।**
**ಚೆನ್ನ ಪುರಂದರವಿಠಲನ್ನ ನೆನೆದರೆ**
**ಮನ್ನಿಸಿ ಸಲಹುವ ವೈದ್ಯ ಶಿರೋಮಣಿ ॥ 5 ॥**

ನಿರ್ಮಲ ಭಕ್ತಿಯಿಂದ ನಿರ್ದೋಷನಾದ ಸರ್ವೋತ್ತಮನಾದ ಶ್ರೀಪುರಂದರವಿಠಲನ್ನ ನೆನೆದರೆ ಮಿಕ್ಕ ಯಾವದೂ ಬೇಕಿಲ್ಲವೆಂಬ ಶಾಸ್ತ್ರಸಾರವನ್ನು ಸಂಗ್ರಹವಾಗಿ ದಾಸರು ನಿರೂಪಿಸಿದ್ದಾರೆ. ನಿಜಾರ್ಥದಲ್ಲಿ ಸರ್ವೋತ್ಕೃಷ್ಟ ವೈದ್ಯನಾದ ಶ್ರೀವೆಂಕಟೇಶನೇ ಸಕಲವೂ ಆಗಿ, ತನ್ನ ಭಕ್ತರ ಸಂಸಾರವೆಂಬ ಭವರೋಗವನ್ನು ನಿವಾರಿಸಿ ತನ್ನ ಧಾಮದಲ್ಲಿರಿಸುವನೆಂದು ಫಲಶೃತಿಯನ್ನು ಹಾಡಿರುವರು. ಇದಕ್ಕೆ ರುದ್ರದೇವರೆ ಸಾಕ್ಷಿ ಎಂಬಂತೆ ಅವರ ಮಾತು,

**ಕಿಂ ತಸ್ಯ ದಾನೈಃ ಕಿಂ ತೀರ್ಥೈಃ ಕಿಂ ತಪೋಭಿಃ ಕಿಮಧ್ವರೈಃ ।**
**ಯೋ ನಿತ್ಯಂ ಧ್ಯಾಯೇತೇ ದೇವಂ ನಾರಾಯಣಮನನ್ಯಧೀಃ ॥**

ಯಾವನು ನಿತ್ಯದಲ್ಲೂ ಸತ್ಯವಾಗಿ ಶುದ್ಧಮನಸ್ಕನಾಗಿ ನಾರಾಯಣನನ್ನು ಧ್ಯಾನಿಸುವನೋ ಅವನಿಗೆ ಬೇರಾವುದರಿಂದಲೂ ಪ್ರಯೋಜನವಿಲ್ಲ. ಒಂದೇ ಮಾತಿನಲ್ಲಿ ಶ್ರೀಪುರಂದರರು ಬದುಕಿನ ಸಾರ್ಥಕ್ಯವನ್ನು

ಹರಿಸ್ಮರಣೆಯಿಲ್ಲದೆ ಬಾಳಿ ಬದುಕಿದರೇನು ।
ನರಜನ್ಮದಲ್ಲಿ ಜನಿಸಿ ಫಲವೇನು..... ಎಂದು ಪ್ರಶ್ನಿಸಿರುವುದನ್ನು ಗಮನಿಸಬೇಕು.

ಅದಕ್ಕೆಂದೇ ದಾಸರು ಅನನ್ಯ ಭಕ್ತಿಯಿಂದ ದಾಸನನ್ನಾಗಿ ಸ್ವೀಕರಿಸೆಂದು ಭವರೋಗವೈದ್ಯನಾದ ವೇಂಕಟೇಶನನ್ನು ಪ್ರಾರ್ಥಿಸಿದರು.

**ದಾಸನ ಮಾಡಿಕೋ ಎನ್ನ ಸ್ವಾಮಿ ।**
**ಸಾಸಿರ ನಾಮದ ವೇಂಕಟರಮಣ ॥**

ಫಲಶೃತಿಯಂತೆ ಶ್ರೀಮದಾಚಾರ್ಯರು ಕೃಷ್ಣಾಮೃತಮಹಾರ್ಣವದಲ್ಲಿ ಶ್ರೀಹರಿಯ ಸ್ಮರಣೆಯಿಂದಾಗುವ ಫಲವನ್ನು

**ವೇದೇಷು ಯಜ್ಞೇಷು ತಪಸ್ಸು ಚೈವ ದಾನೇಷು ತೀರ್ಥೇಷು ವ್ರತೇಷು ಯಚ್ಚ ।**
**ಇಷ್ಟೇಷು ಪೂರ್ತೇಷು ಚ ಯತ್ ಪ್ರದಿಷ್ಟಂ ಪುಣ್ಯಂ ಸ್ಮೃತೇ ತತ್ ಖಲು ವಾಸುದೇವೇ ॥**

ಶ್ರೀಪುರಂದರರು ಇದರ ಭಾಷಾಂತರದಂತೆ ತಮ್ಮ ಕಡೆಯ ಪದ್ಯದಲ್ಲಿ ನಿರೂಪಿಸಿರುವರು. ಜೀವನದಲ್ಲಿ ಸಾಧಿಸಬಯಸುವವರು, ಶ್ರೀಹರಿಯ ಕೃಪಾಪೂರ್ಣ ದೃಷ್ಟಿಯ ಆಕಾಂಕ್ಷಿಗಳು, ಈ ಸಂಸಾರ ಬಂಧನದಿಂದ ಮುಕ್ತಿಯನ್ನು ಬಯಸುವವರು ಶ್ರೀಪುರಂದರದಾಸರ ಈ ಮಾತನ್ನು ಪರಿಪಠಿಸಬೇಕು.

**ಎಂದೆಂದಿಗೂ ನಿನ್ನ ದಾಸನಾಗಬೇಕೋ ।**
**ಪುರಂದರವಿಠಲ ಚರಣವನ್ನು ತೋರಬೇಕೋ ॥**

ಯಾವದೇ ಔಷಧಿಗಳಲ್ಲಿ ಅಂತರ್ಯಾಮಿಯಾಗಿ ಅವುಗಳಿಗೆ ಶಕ್ತಿಕೊಟ್ಟು ಜೀವರ ರೋಗ ನಿವಾರಣೆ ಮಾಡುವವನು ಸರ್ವದಾ ಧನ್ವಂತರೀ ರೂಪಿ ಶ್ರೀಹರಿಯೇ ಆಗಿರುವ ವೈದ್ಯರಲ್ಲಿ ಇದ್ದು ಪ್ರೇರಣೆ ಮಾಡುವವನೂ ಅವನೇಯಾಗಿರುವ ಔಷಧ ನಾಮಕನೂ ಮುಖ್ಯ ವೃತ್ತಿಯಿಂದ ಭಗವಂತನೆ. ಇದನ್ನು ವಿಷ್ಣುಸಹಸ್ರನಾಮದಲ್ಲಿ 'ಔಷಧಂ ಜಗತಃ ಸೇತುಃ' ಎಂದು ಹೇಳಿದೆ. ಇದು ತಾತ್ಕಾಲಿಕ ಪರಿಶಮನ ರೂಪವಾದರೆ, ಶಾಶ್ವತ ಭವರೋಗವನ್ನು ಶಾಶ್ವತವಾಗಿ ಕಳೆದು ನಿತ್ಯಸುಖರೂಪದ ಮುಕ್ತಿಯನ್ನು ಕೊಡುವವನು ವೇಂಕಟೇಶನೇ ಆಗಿರುವ. ಅದಕ್ಕೆಂದೇ ದಾಸರು 'ವೆಂಕಟನೆಂಬ ವೈದ್ಯ ಬಂದ ನೋಡಿ' ಎಂದು ನಮ್ಮ ಚಕ್ಷುರಿಂದ್ರಿಯ ಹಾಗೂ ಅಂತಃಚಕ್ಷುವಾದ ಸಾಕ್ಷಿಗೆ ದಿಗ್ದರ್ಶನ ಮಾಡಿ ಮಹದುಪಕಾರ ಮಾಡಿರುವರು. ನಮ್ಮ ಕಣ್ಣು ತೆರೆಸಿದ ಶ್ರೀಪುರಂದರದಾಸರೆಂಬ ವೈದ್ಯರು ಆ ಮಹಾವೈದ್ಯನಾದ ಭಗವಂತನ ದರುಶನವನ್ನು ಮಾಡಿಸಿರೆಂದು ಪ್ರಾರ್ಥಿಸೋಣ.

## ಶ್ರೀ ಕೃಷ್ಣಾರ್ಪಣಮಸ್ತು